ಸಾವು ಮುಟ್ಟಿದ ಮನೆ ಚೇತರಿಸಿಕೊಳ್ಳಲು ಸಮಯ ಹಿಡಿಸಿತ್ತು. ಬದುಕು ಮತ್ತೆ ಹಳಿಗೆ ಬಂದಿತ್ತು. ಜತಿನ್ ಹೋದ ಮೇಲೆ, ಭಾವೇಶ್ ಅಮ್ಮ ಅಪ್ಪನ ಜಗತ್ತಿನ ಏಕೈಕ ಕೇಂದ್ರಬಿಂದುವಾಗಿದ್ದ. ಇನ್ನಿಲ್ಲದ ಆಸ್ಥೆಯಿಂದ ಆತನನ್ನು ಬೆಳೆಸಿದರು. ಆತನ ಪ್ರತಿ ಇಚ್ಛೆಯನ್ನು ಪೂರೈಸುವತ್ತ ಅವರ ಪ್ರಯತ್ನವಿತ್ತು.

ಅಮ್ಮ ಭಾವೇಶನನ್ನು ಸಿನೆಮಾ ತೋರಿಸಲು ಕರೆದೊಯ್ಯುವಳು. ಎಲ್ಲರಿಗಿಂತ ಮೊಟ್ಟ ಮೊದಲ ಸಾಲಿನಲ್ಲಿ ಕೂರುವವರು. ಮುಂದಿನ ಆ ಸೀಟುಗಳಲ್ಲಿ ಹೆಂಗಸರು ಕುಳಿತದ್ದೇ ಇಲ್ಲ. ಆದರೆ ಮಗನಿಗೆ ಏನಾದರೂ ಕಾಣಬಹುದು ಎಂಬ ಅದಮ್ಯ ಆಸೆ ತಾಯಿಗೆ. ಹಾಗಿದ್ದೂ ಭಾವೇಶನ ಕ್ಷೀಣ ದೃಷ್ಟಿಗೆ ಎಲ್ಲವೂ ಮಬ್ಬು ಮಬ್ಬು. ಅಮ್ಮ ಪೂತರ್‌ೀ ಚಿತ್ರವನ್ನು ಭಾವೇಶ್‌ಗೆ ತಿಳಿಸಿ ಹೇಳುತ್ತಾ ಹೋಗುವಳು. ಜೊತೆಗೆ ಸಿನೆಮಾ ಹಾಡು, ಸಂಭಾಷಣೆಯನ್ನೂ ಗಮನವಿಟ್ಟು ಕೇಳುವ ಭಾವೇಶ್‌ಗೆ ಚಿತ್ರಕತೆ ಪೂರ್ಣ ಅರ್ಥವಾಗುತ್ತಿತ್ತು. ಎಲ್ಲ ಸಾಮಾನ್ಯ ಹುಡುಗರಂತೆಯೇ ತನ್ನ ಮಗನ ಬದುಕು ಇರಬೇಕು ಎಂಬತ್ತ ಆ ತಾಯಿಯ ಶತ ಪ್ರಯತ್ನವಿತ್ತು.

ಬಡತನದಲ್ಲಿಯೂ ಬಾಲ್ಯ ಸಂತಸದ ಅನುಭವಗಳನ್ನು ಮಡಿಲಿಗೆ ಸುರಿಯುತ್ತಿತ್ತು. ತಂದೆಯದು ಅತಿ ಸಣ್ಣ ಸಂಬಳ. ಹೆಚ್ಚು ಆಟ ಪಾಠದ ಸಾಧನಗಳೇನೂ ಇಲ್ಲದಿದ್ದರೂ, ಭಾವೇಶ್‌ಗೆ ಸದಾ ಖುಷಿಯನ್ನು ಕೊಡಲು ಕಾತರಿಸಿದ ತಂದೆ. ಬಾಲ್ಯದಲ್ಲಿ ದೀಪಾವಳಿಯ ದಿನ, ಅಪ್ಪ ಭಾವೇಶನ ಬೆರಳುಗಳನ್ನು ಹಿಡಿದು ಸೈಕಲ್ಲಿನ ಅಂಗಡಿಗೆ ಕರೆದೊಯ್ಯುವರು. ಅಲ್ಲಿ ಒಂದು ಗಂಟೆಗೆ 50 ಪೈಸೆಯ ಬಾಡಿಗೆಯ ಮೇಲೆ ಸೈಕಲ್ ಪಡೆದು, ಸಂಜೆಯ ಹೊತ್ತು ಪೂರಾ ಶಹರನ್ನು ಸುತ್ತು ಹಾಕಿಸಿ ಬರುವರು. ಸೈಕಲಿನ ಮುಂದಿನ ಬಾರ್ ಮೇಲೆ ಕುಳಿತ ಭಾವೇಶ್ ಪಟಾಕಿ, ಸುರುಸುರುಬತ್ತಿ, ಭೂಚಕ್ರ, ವಿಷ್ಣುಚಕ್ರಗಳ ವಿವಿಧ ಬಗೆಯ ಶಬ್ದ ಕೇಳಿ ಆನಂದಿಸುವರು. ಒಂದಿಷ್ಟು ಮಬ್ಬು ಮಬ್ಬಾದ ದೃಶ್ಯವನ್ನು ಕಣ್ಣಲ್ಲಿ ತುಂಬಿಕೊಂಡು ಖುಷಿ ಪಡುವರು. ತಾನೇ ಸ್ವತಃ ಆ ಎಲ್ಲ ಪಟಾಕಿ ಹೊಡೆಯುತ್ತಿರುವೆನೆಂಬ ಸಂಭ್ರಮದಲ್ಲಿ ಬಡತನ ಮರೆತೇ ಹೋಗಿರುತ್ತಿತ್ತು.

ಭಾವೇಶನ ವಿದ್ಯಾಭ್ಯಾಸದತ್ತ ಅಮ್ಮ ವಿಶೇಷ ಗಮನ ಹರಿಸಿದಳು. ಆ ತಾಯಿ ಮಗನನ್ನು ನಾಲ್ಕು ಮತ್ತು ಏಳನೇ ತರಗತಿಯಲ್ಲಿದ್ದಾಗ ವಿದ್ಯಾರ್ಥಿ ವೇತನದ ಪರೀಕ್ಷೆಗೂ ಕೂರುವಂತೆ ಮಾಡಿದ್ದಳು. ಹತ್ತಾರು ಸಾಮಾನ್ಯ ಜ್ಞಾನದ ಪುಸ್ತಕಗಳನ್ನು ಓದಿ ಹೇಳುವಳು. ಅಮ್ಮ ತಮಗೆಂದು ಒಂದು ಸೀರೆ ಕೊಂಡವಳಲ್ಲ. ಆದರೆ ಮಗನಿಗೆ ಪುಸ್ತಕ ಕೊಡಿಸುವುದರಲ್ಲಿ ಹಿಂದೆ ಉಳಿಯಲಿಲ್ಲ. ಸ್ಕಾಲರ್‌ಶಿಪ್ ಬಾರದಿದ್ದರೂ, ಅಮ್ಮ ಓದಿ ಹೇಳಿದ ಜ್ಞಾನದ ಭಂಡಾರ ಭಾವೇಶನ ತಲೆಯಲ್ಲಿ ಉಳಿಯಿತು.

ಮಗನ ಪುಸ್ತಕದ ಪ್ರೀತಿಯನ್ನು ಕಂಡ ತಾಯಿ ಹೊಸ ಹೊಸ ಚಿತ್ರಕತೆಗಳಿರುವ ಮಕ್ಕಳ ಪತ್ರಿಕೆ, ಪುಸ್ತಕಗಳನ್ನು ಕೊಂಡು ತರುವಳು, ಅವನಿಗೆ ದಿನವೂ ಓದಿ ಹೇಳುವಳು. ಚಿತ್ರಗಳನ್ನು ಕಣ್ಣಲ್ಲಿ ಕಂಡಂತೆ ವಿವರಿಸುವಳು. ಅಮ್ಮನ ಕಣ್ಣುಗಳಿಂದ, ಪುಸ್ತಕದ ಜ್ಞಾನ ನೇತ್ರಗಳಿಂದ, ತನ್ನುಳಿದ ಶ್ರವಣೇಂದ್ರಿಯಗಳಿಂದ ಭಾವೇಶ್ ಹೊರಗಿನ ಜಗತ್ತನ್ನು 'ನೋಡ' ತೊಡಗಿದ್ದ.

ಇದೇ ಸಮಯದಲ್ಲಿ ಅವರ ಶಾಲೆ, ಸೈಕಲ್ ರಿಕ್ಷಾದಲ್ಲಿ ಪುಸ್ತಕಗಳನ್ನು ಜೋಡಿಸಿ, ಒಂದು 'ಸಂಚಾರಿ ಗ್ರಂಥಾಲಯ'ವನ್ನು ಆರಂಭಿಸಿತ್ತು. ಅಮ್ಮ ಅದರ ಸದಸ್ಯಳಾದಳು. ಪ್ರತಿಯೊಬ್ಬ ಸದಸ್ಯರ ಮನೆಗೆ ಈ ಸೈಕಲ್ ರಿಕ್ಷಾ ಬರುತ್ತಿತ್ತು. ಸದಸ್ಯರು ತಮಗೆ ಬೇಕಾದ ಪುಸ್ತಕ ತೆಗೆದುಕೊಳ್ಳ ಬಹುದಿತ್ತು. ತೆಗೆದುಕೊಂಡ ಪುಸ್ತಕವನ್ನು ಓದಿ ಮುಗಿಸಿದಾಗ ಹಿಂತಿರುಗಿಸಿ, ಮತ್ತೊಂದು ಪುಸ್ತಕ ಪಡೆಯಬಹುದಿತ್ತು.

ಸೈಕಲ್ ರಿಕ್ಷಾದ ಗಂಟೆ ಬಾರಿಸಿದ ಶಬ್ದ ಕೇಳಿದೊಡನೆ ಭಾವೇಶ್‌ಗೆ ಎಲ್ಲಿಲ್ಲದ ಖುಷಿ. ಅಮ್ಮನನ್ನು ಕೂಗಿ ಕರೆದು ಕತೆಗಳ ಪುಸ್ತಕಗಳನ್ನು ತೆಗೆದುಕೊಳ್ಳುವಂತೆ ಹೇಳುವನು. ಆ ದಿನಗಳಲ್ಲಿ ಅವರ ಮನೆಗೆ 'ಧರ್ಮಯುಗ್' ಪತ್ರಿಕೆ ಬರುತ್ತಿತ್ತು. ಅದರಲ್ಲಿಯ 'ಡಬ್ಬೂಜೀ' ವ್ಯಂಗ್ಯ ಚಿತ್ರಕತೆ ಭಾವೇಶ್‌ಗೆ ಅಚ್ಚುಮೆಚ್ಚು. ಅಮ್ಮ ಯಾವಾಗಲೂ ಅವುಗಳನ್ನು ಓದಿ ಹೇಳುವಳು. ಭಾವೇಶ್ ಖುಷಿಯಿಂದ ಕತೆ ಕೇಳಿ ನಗುವರು. 'ನಂದನ್', 'ಚಂಪಕ್' ಮತ್ತು 'ಚಂದಮಾಮಾ' ಅವರ ಮತ್ತಷ್ಟು ಪ್ರೀತಿಯ ಪತ್ರಿಕೆಗಳು.

ಘಾಟ್ಕೊಪ್ಪರ್‌ನಿಂದ ಯಾರಾದರೂ ಗೋಂದಿಯಾಗೆ ಬರುವವರಿದ್ದರೆ, ಅಜ್ಜ ಭಾವೇಶ್‌ಗೆಂದೇ ಬಹಳಷ್ಟು ಮಕ್ಕಳ ಚಿತ್ರಕತೆಯ ಪತ್ರಿಕೆಗಳನ್ನು ಕಳುಹಿಸಿ ಕೊಡುವರು. ಈ ಪತ್ರಿಕೆಗಳ ಹುಚ್ಚು ಎಷ್ಟಿತ್ತೆಂದರೆ, ಐದನೇ ತರಗತಿಗೆ ಬರುವ ಹೊತ್ತಿಗೆ ಭಾವೇಶನ ಬಳಿ ಒಂದು ಸಾವಿರಕ್ಕೂ ಹೆಚ್ಚು ಚಿತ್ರಕತೆಯ ಪುಸ್ತಕಗಳು ಸಂಗ್ರಹವಾಗಿದ್ದವು. ಪುಸ್ತಕಗಳು ಆತನ ಅಮೂಲ್ಯ ಸಂಪತ್ತಾಗಿತ್ತು. ಪುಸ್ತಕಗಳ ಧೂಳು ಹೊಡೆದು ಅವುಗಳನ್ನು ಪ್ರತಿದಿನವೂ ಅಚ್ಚುಕಟ್ಟಾಗಿ ಜೋಡಿಸಿ ಇಡುವುದು ಪ್ರೀತಿಯ ಕಾಯಕವಾಗಿತ್ತು.

ಒಂದು ದಿನ ಭಾವೇಶ್‌ಗೆ ಅನಿಸಿತು, 'ಈ ಎಲ್ಲ ಪತ್ರಿಕೆಗಳನ್ನು ತೆಗೆದುಕೊಂಡು ನಾನೂ ಒಂದು ವಾಚನಾಲಯ ಏಕೆ ಆರಂಭಿಸಬಾರದು?' ಅಮ್ಮನನ್ನು ಕೇಳಿ ಒಪ್ಪಿಗೆ ಪಡೆದರು. ಮನೆಯ ಮೂಲೆಯೊಂದರಲ್ಲಿ ಪುಸ್ತಕಗಳನ್ನು ಜೋಡಿಸಿ ಇಟ್ಟರು, ಅಲ್ಲಿಯೇ ವಾಚನಾಲಯ ಆರಂಭವಾಯಿತು. ಅದಕ್ಕೆ 'ಗಾಯತ್ರಿ ವಾಚನಾಲಯ' ಎಂದು ಹೆಸರೂ ಕೊಟ್ಟರು. ಈ ವಾಚನಾಲಯದಿಂದ ಬಂದ ಹತ್ತು, ಹತ್ತು ಪೈಸೆಗಳನ್ನು ಕೂಡಿಸಿ, ಸಂಗ್ರಹವಾದ ಸಣ್ಣ ಮೊತ್ತದ ಹಣದಿಂದ ಭಾವೇಶ್ ಅಮ್ಮನೊಡನೆ ರೈಲು ನಿಲ್ದಾಣಕ್ಕೆ ಹೋಗಿ, ಅಲ್ಲಿದ್ದ ಪುಸ್ತಕದ ಅಂಗಡಿಯಲ್ಲಿ ಮತ್ತಷ್ಟು ಪತ್ರಿಕೆಗಳನ್ನು, ಪುಸ್ತಕಗಳನ್ನು ಕೊಳ್ಳುತ್ತಿದ್ದನು. ಆ ದಿನಗಳಲ್ಲಿ ಬರುತ್ತಿದ್ದ ಅಮರಚಿತ್ರ ಕತೆಗಳು ಆತನಿಗೆ ಬಲು ಆಕರ್ಷಣೀಯವಾಗಿದ್ದವು. ಅಮ್ಮ ಸೊಗಸಾಗಿ ಆ ಕತೆಗಳನ್ನು, ಚಿತ್ರಗಳನ್ನೂ ವಿವರಿಸಿ ಹೇಳುವಳು. ಚರಿತ್ರೆಯ ಅನೇಕ ವ್ಯಕ್ತಿಗಳ ಕತೆಗಳು ಭಾವೇಶನ ಎಳೆಯ ಮನಸ್ಸಿನಲ್ಲಿ ಅಚ್ಚೊತ್ತಿ ಉಳಿದವು. ಆ ಎಲ್ಲ ವ್ಯಕ್ತಿಗಳ ಜೀವನಗಾಥೆಯ ಮೂಲಕ ಅಮ್ಮ ಸಮಾಜಕ್ಕಾಗಿ ಅವರು ಸಮರ್ಪಿಸಿಕೊಂಡ ಬಗೆಯನ್ನು ತಿಳಿಸಿ ಹೇಳಲು ಪ್ರಯತ್ನಿಸುತ್ತಿದ್ದಳು.

ಪುಸ್ತಕಗಳಾಚೆಗೆ ಭಾವೇಶ್‌ಗೆ ಸಂಗೀತದಲ್ಲಿಯೂ ಆಸಕ್ತಿ ಇತ್ತು. ತಂದೆಯವರಿಗೆ ಶಾಸ್ತ್ರೀಯ ಸಂಗೀತದಲ್ಲಿ ಒಳ್ಳೆಯ ಅಭಿರುಚಿಯಿತ್ತು. ಅವರು ಕೆಲಸ ಮಾಡುತ್ತಿದ್ದ ಕಂಪನಿಯ ಆವರಣದಲ್ಲಿ ಅತಿಥಿ ಗೃಹವಿತ್ತು. ಇಲ್ಲಿ ಕಾರ್ಯಕ್ರಮಗಳನ್ನು ನಡೆಸಲೆಂದೇ ಒಂದು ದೊಡ್ಡ ಸಭಾಂಗಣವಿತ್ತು. ಅನೇಕ ಮಹನೀಯರ ಸಂಗೀತದ ಕಛೇರಿಗಳು ಅಲ್ಲಿ ನಡೆದಿದ್ದವು. ಗಂಗೂಬಾಯಿ ಹಾನಗಲ್, ಶಿವಕುಮಾರ್ ಶರ್ಮ, ಹರಿಪ್ರಸಾದ್ ಚೌರಾಸಿಯ ಮುಂತಾದ ದಿಗ್ಗಜರನ್ನು ಮೊಟ್ಟ ಮೊದಲಿಗೆ ಭಾವೇಶ್ ಆಲಿಸಿದ್ದು ಆ ಸಭಾಂಗಣದಲ್ಲಿ. ಎಂತಹ ಅದ್ಭುತದ ಕಾರ್ಯಕ್ರಮಗಳವು! ಇಂತಹ ಪರಿಸರದಲ್ಲಿ ಭಾವೇಶ್ ಅವರಿಗೆ ಸಂಗೀತದೊಡನೆ ದಟ್ಟ ಸ್ನೇಹ ಸಂಬಂಧ ಬೆಳೆಯಿತು.

ತಂದೆಯವರಿಗೆ ಗಜಲ್ ಕೂಡಾ ಪ್ರಿಯವಾಗಿತ್ತು. ಬುಧವಾರ ಅವರಿಗೆ ವಾರದ ರಜೆ. ಟೇಪ್ ರೆಕಾರ್ಡ್‌ನಲ್ಲಿ ಗಜಲ್ ಕೇಳುತ್ತಿದ್ದರು. ಭಾವೇಶ್‌ಗೂ ಗಜಲ್ ಕೇಳುವ ಆಸಕ್ತಿ ಬೆಳೆಯಿತು. ಉರ್ದುವಿನ ಅನೇಕ ಪದಗಳ ಅರ್ಥ ಗೊತ್ತಾಗದಾಗ, ಅಪ್ಪನಲ್ಲಿ ಕೇಳುತ್ತಿದ್ದ. ಗಜಲ್‌ನ ಒಂದೇ ಪದದಲ್ಲಿ ಸಂಗೀತಗಾರ ಏನೆಲ್ಲವನ್ನು ಅಭಿವ್ಯಕ್ತಿಸಲು ಪ್ರಯತ್ನಿಸುತ್ತಾನೆ ಎಂದು ಅಪ್ಪ ವಿವರಿಸಿ ಹೇಳುವರು. ಆ ದಿನಗಳಲ್ಲಿ ಅನೂಪ್ ಜಲೋಟಾ ಅವರ ಭಜನೆ ಮತ್ತು ಗಜಲ್ ಬಹಳಷ್ಟು ಜನಪ್ರಿಯವಾಗಿದ್ದವು. ಅವುಗಳಲ್ಲಿ ಒಂದು ಗಜಲ್ 'ಚಾಂದ್ ಅಂಗಡಾಯಿಯಾ ಲೇ ರಹಾ ಹೈ, ಚಾಂದಿನಿ ಮುಸ್ಕುರಾನೇ ಲಗೀ ಹೈ' ಇದು ಎಳೆಯ ಭಾವೇಶ್‌ಗೆ ಅರ್ಥವೇ ಆಗುತ್ತಿರಲಿಲ್ಲ. ಅರೆ ಚಂದ್ರ ಹೇಗೆ ಮೈಮುರಿಯುತ್ತಾನೆ. ಬೆಳದಿಂಗಳು ಹೇಗೆ ಮುಗುಳ್ನಗುತ್ತದೆ? ಯೋಚಿಸುವರು. ಕಾವ್ಯದ ಈ ಪರಿಯ ಭಾಷೆ ಅರ್ಥವಾಗದಿದ್ದರೂ, ಇವನ್ನು ಕೇಳುತ್ತಲೇ ಬೆಳೆದ ಭಾವೇಶ್ ಮುಂದಿನ ದಿನಗಳಲ್ಲಿ ಸ್ವತಃ ಶಾಯರಿ ರಚಿಸಲಿದ್ದರು!

ಅದೇ ರೀತಿ ಬೇಗಮ್ ಅಕ್ತರ್ ಅವರು ಹಾಡಿದ, 'ಹಮ್ತೋ ಸಮಝೆ ಥೆ ಕೆ ಬರ್ಸಾತ್ ಮೇ ಬರಸೇಗಿ ಶರಾಬ್, ಆಯಿ ಬರಸಾತ್ ತೊ ಬರಸಾತ್ ನೆ ದಿಲ್ ತೋಡ್ ದಿಯಾ ಗಜಲ್ ಅನ್ನೂ ಕೇಳಿದ್ದ. ಅರೆ ಮಳೆಯಲ್ಲಿ ಶರಾಬ್ ಎಲ್ಲಿಂದ ಸುರಿಯಲು ಸಾಧ್ಯ? ಅಪ್ಪನಿಗೆ ಈ ಸುಂದರ ಉಪಮೆಗಳನ್ನು ಪುಟ್ಟ ಭಾವೇಶನಿಗೆ ಹೇಗೆ ಅರ್ಥ ಮಾಡಿಸುವುದು ಎಂದು ತಿಳಿಯುತ್ತಿರಲಿಲ್ಲ. ಕೆಲವೊಮ್ಮೆ ನಕ್ಕು ಸುಮ್ಮನಾಗುವರು. ಆದರೆ ಬಾಲ್ಯದಲ್ಲಿಯೇ ಶಬ್ದಗಳತ್ತ, ಅವುಗಳಿಂದ ಹೊಮ್ಮುವ ಅರ್ಥಗಳತ್ತ, ಭಾವಗಳತ್ತ ಭಾವೇಶ್‌ಗೆ ಕುತೂಹಲ ಮೂಡಿತ್ತು. ಶಬ್ದಗಳೊಡನೆ, ಪದಗಳೊಡನೆ ಆಡುವುದನ್ನು ಕಲಿತರು. ಅವರ ಹೃದಯದ ಮೂಲೆಯಲ್ಲಿ ಎಲ್ಲೋ ಎಳೆಯ ಕವಿಯೊಬ್ಬ ಜಾಗೃತನಾಗಿದ್ದ.

(ಸಶೇಷ)